## ‘ಸುಧಾ’ ಜೊತೆಗಿನ ಒದುಗರ ಒಡನಾಟ

### ವೈವಿಧ್ಯದ ಸಂಗಮ

ಎಲ್ಲ ವಯಸ್ಸಿನವರಿಗೂ ಪ್ರಿಯವಾಗಿರುವ ನೀನು, ವಿವಿಧತೆಯಿಂದ ಕೂಡಿದ ಅತ್ಯುತ್ತಮ ವಾರಪತ್ರಿಕೆ. ನಾನು 10ನೇ ತರಗತಿಯಿದ್ದಾಗಲೇ ಅನುಪಮಾ ನಿರಂಜನರವರ ‘ಸ್ನೇಹ ಪಲ್ಲವಿ’ ಕಾದಂಬರಿಯನ್ನು ಅಮ್ಮನ ಕಣ್ಣು ತಪ್ಪಿಸಿ ಓದುತ್ತಿದ್ದ ನೆನಪು. ಪಾತ್ರಗಳೇ ನಾವಾಗುವಂತೆ ಮಾಡುವಂಥ ಧಾರಾವಾಹಿಗಳವು. ‘ಸುಧಾ’ದಲ್ಲಿ ಪ್ರತಿಕ್ರಿಯೆಗಳನ್ನು ನೋಡಿ ನಾನೂ ಬರೆಯಬೇಕು ಅನಿಸುತ್ತಿತ್ತು. ಒಂದು ದಿನ ಧೈರ್ಯ ಮಾಡಿ ಕಳುಹಿಸಿದೆ. ಮೊದಲ ಬಾರಿ ಬಂದಿದ್ದ ನನ್ನ ಪ್ರತಿಕ್ರಿಯೆ ಕಂಡು ಕುಣಿದಾಡುವಂಥ ಖುಷಿಯಾಯಿತು.

—ಭಾರತೀ ಗಂಗಾಧರ್, ಬೆಂಗಳೂರು

### ದುಂಬಾಲು ಬಿದ್ದು ಓದುತ್ತಿದ್ದೆವು

‘ಸುಧಾ’ ಆರಂಭವಾದಾಗ ಮೈಸೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿದ್ದೆ. ಹಾಸ್ಟೆಲ್‌ನಲ್ಲಿದ್ದ ನಾನು, ಪ್ರತಿ ವಾರವೂ ‘ಸುಧಾ’ ಓದುವುದನ್ನು ರೂಢಿಸಿಕೊಂಡಿದ್ದೆ. ನನ್ನ ಸ್ನೇಹಿತರು ಕೂಡ ಓದಲು ದುಂಬಾಲು ಬೀಳುತ್ತಿದ್ದರು! ಅನೇಕ ಸಾರಿ ಅವರು ಬರುವ ಶಬ್ದ ಕೇಳಿಸಿಕೊಂಡು ನಾನು ಪತ್ರಿಕೆ ಬಚ್ಚಿಟ್ಟು ನಿದ್ದೆ ಹೋದ ಹಾಗೆ ನಟಿಸುತ್ತಿದ್ದೆ. ಕಾಲಾಂತರ ನನ್ನ ಕೆಲವು ಲೇಖನಗಳು ‘ಸುಧಾ’ದಲ್ಲೇ ಪ್ರಕಟಗೊಂಡಿದ್ದು ನನಗೆ ಹೆಮ್ಮೆ ಹಾಗೂ ಖುಷಿ ನೀಡುವ ಸಂಗತಿ.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

### ಕನ್ನಡದ ಅಸ್ಮಿತೆ

ನಾನು 10 ವರ್ಷದವಳಾಗಿದ್ದಾಗಿನಿಂದಲೂ ನನ್ನ ಓದಿನ ಸಂಗಾತಿ ‘ಸುಧಾ’. ನನಗಿವಳು ಹಿರಿಯಕ್ಕನಂತೆ. ನನ್ನನ್ನು ಸಾಹಿತ್ಯದ ಓದಿಗೆ ಪ್ರೇರೇಪಿಸಿದಳು. ನನ್ನ ತಿಳಿವು, ವಿಚಾರದ ಹರಿವನ್ನು ವಿಸ್ತರಿಸುತ್ತಲೇ ಇಂದಿಗೂ ಅದೇ ಸಖ್ಯದಲ್ಲಿದ್ದಾಳೆ.

ಸಣ್ಣ ಕಥೆಗಳು, ಧಾರಾವಾಹಿ, ವಿಚಾರ ಲಹರಿ ನನಗಿಷ್ಟದ ಪುಟಗಳು. ಈಚೆಗೆ ಪರಿಸರ ಕುರಿತಾದ ಲೇಖನಗಳು ಗಂಭೀರ, ವೈಚಾರಿಕ ನೆಲೆಯಲ್ಲಿ ತೀಕ್ಷ್ಣವಾಗಿ ನಮ್ಮನ್ನು ಅವಲೋಕಿಸುವಂತೆ ಮಾಡುತ್ತಿವೆ. ಅರೆಕೊರೆಗಳು ಇಲ್ಲದಂತೆ ಸಾಗಿ ಬಂದಿರುವ ‘ಸುಧಾ’ ಈಗ ಮಾಗಿದ್ದಾಳೆ. ಸುದೀರ್ಘಕಾಲ ಓದಿನ ಅಮೃತದ ಸವಿಯೊಂದಿಗೆ, ವಿಚಾರಗಳ ಮಾಧುರ್ಯವನ್ನೂ ಉಣಬಡಿಸಿದ ‘ಸುಧಾ’, ‘ಕನ್ನಡದ ಅಸ್ಮಿತೆ’ಯಾಗಿದ್ದಾಳೆ.

—ಸುಜಾತ ಕುಚ್ಚಣ್ಣ, ಬೆಂಗಳೂರು

### ಓದಿನ ಸುಗ್ಗಿ

ನನ್ನ ಅಣ್ಣ ರಜೆಗೆ ಮೈಸೂರಿನಿಂದ ಬಂದರೆ ಎರಡು ತಿಂಗಳ ‘ಸುಧಾ’ ಮನೆಗೆ ಬರುತ್ತಿದ್ದವು. ರಜೆಯ ಎಂಟರಿಂದ ಹತ್ತು ವಾರಗಳ ಕಾಲ ನಮಗೆ ಓದಿನ ಸುಗ್ಗಿ (ಪಠ್ಯಪುಸ್ತಕಗಳದ್ದಲ್ಲ).

‘ಸುಧಾ’ದ ಒಂದು ಅಕ್ಷರವನ್ನೂ ಬಿಡದೆ ಓದುತ್ತಿದ್ದೆ. ಆಗ ಪ್ರಕಟವಾಗುತ್ತಿದ್ದ ಕಥೆ, ಕವನ, ಧಾರಾವಾಹಿಗಳು ನನ್ನ ಮನಸೂರೆಗೊಂಡಿದ್ದವು. ಎಚ್.ಕೆ. ಅನಂತರಾವ್ ಅವರ ‘ಅಂತ’, ಅಶ್ವಿನಿಯವರ ‘ಮೃಗತೃಷ್ಣ’ ಕಾದಂಬರಿ, ಡಾ. ಹೆಚ್. ಗಿರಿಜಮ್ಮ ಅವರ ‘ಹೂಬಳ್ಳಿ’, ಎನ್.ಎಸ್. ಚಿದಂಬರರಾವ್ ಅವರ ‘ಶರನ್ನವರಾತ್ರಿ’... ಹೀಗೆ ಸಾಕಷ್ಟು ಧಾರಾವಾಹಿಗಳನ್ನು ಓದಿದ್ದೇನೆ. ಅತ್ಯುತ್ತಮವಾದ ಸಾಹಿತ್ಯ ಪ್ರಕಾರಗಳನ್ನು ಓದಿ ಪುನೀತನಾಗಿದ್ದೇನೆ.

ಅಂದಿನಿಂದ ಇಂದಿನವರೆಗೂ ಉತ್ತಮ ಸಾಹಿತ್ಯ ಪ್ರಕಾರಗಳ ರಸದೌತಣ ಬಡಿಸುತ್ತಿರುವ ‘ಸುಧಾ’ ಇದೇ ಹುಮ್ಮಸ್ಸಿನಲ್ಲಿ ಮುಂದುವರೆಯಲಿ.

—ಸದ್ಯೋಜಾತ, ಅಸಗೋಡು

### ‘ಸುಧಾ’ಗೆ ಅಂಟಿದ ಮನ

‘ಸುಧಾ’ ಜೊತೆಗೆ ನನ್ನ ಬೆಸುಗೆ ಬಹುಶಃ ನಾನು ಎರಡು ವರ್ಷಗಳ ಮಗುವಾಗಿದ್ದಾಗಿನಿಂದ. ಡಾಬು, ಫ್ಯಾಂಟಮ್ ಕತೆಗಳು ಅಕ್ಷರ ತಿಳಿಯದ ನನ್ನನ್ನು ‘ಸುಧಾ’ಕ್ಕೆ ಅಂಟಿಸಿದ್ದವು. ಅಪ್ಪ ಅಮ್ಮನಿಗೆ ‘ಸುಧಾ’ ತೋರಿಸಿ ಕತೆ ಹೇಳಲು ದುಂಬಾಲು ಬೀಳುವಾಗ ಮೊದಮೊದಲು ಕತೆ ಹೇಳುತ್ತಿದ್ದ ಅವರು, ನಂತರ ‘ನೀನೇ ಓದಲು ಕಲಿ’ ಎಂದು ಹೇಳಿಬಿಟ್ಟರು. ಕಾರ್ಟೂನ್ ಕತೆ ಓದಲು ಅಕ್ಷರ ಕೂಡಿಸಿ ಓದುವುದನ್ನು ಆಸಕ್ತಿಯಿಂದ ಕಲಿತೆ. ಈಗ ‘ಸುಧಾ’ದಲ್ಲಿ ಡಾಬು ಫ್ಯಾಂಟಮ್ ಕತೆಗಳು ಇಲ್ಲ. ಇಂದಿನ ಮಕ್ಕಳಿಗೆ ‘ಸುಧಾ’ ನಂಟು ಬೆಳೆಯಲು ಈ ಕತೆಗಳು ತುಂಬಾ ಅಗತ್ಯ. ‘ಸುಧಾ’ದಲ್ಲಿ ಮತ್ತೊಮ್ಮೆ ಈ ಕತೆಗಳು ಮೂಡಿಬಂದು ನನ್ನ ಮಗಳ, ಮೊಮ್ಮಕ್ಕಳ ಕಾಲಕ್ಕೂ ಉತ್ತಮ ಸಮಾಜ ಕಟ್ಟುವಲ್ಲಿ ‘ಸುಧಾ’ ಪ್ರಮುಖ ಪಾತ್ರ ವಹಿಸುವಂತಾಗಲಿ.

—ವಿನು ಗಂಗೆ

### ನನ್ನ ಪ್ರೇರಕಶಕ್ತಿ

‘ಸುಧಾ’ ಓದಲು ಕೈಯಲ್ಲಿ ಹಿಡಿದಾಗ ನನಗೆ 12 ವರ್ಷ. ಕಳೆದ 60 ವರ್ಷಗಳಿಂದ ಓದುತ್ತಲೇ ಬಂದಿರುವೆ, ಒಮ್ಮೆಯೂ ಮಿಸ್ ಮಾಡದೇ. ‘ಸುಧಾ’ ಜೊತೆಜೊತೆಗೆ ನಾನೂ ಬೆಳೆದೆ. ನನ್ನ ಮೊದಲ ಲೇಖನ 2005ರಲ್ಲಿ ‘ಸುಧಾ’ದಲ್ಲಿ ಪ್ರಕಟವಾದಾಗ ಆದ ಆನಂದ ಅಷ್ಟಿಷ್ಟಲ್ಲ. ಜೊತೆಗೆ 100ರೂ ಬಹುಮಾನ ಕೂಡ. ಮೊದಲ ಪ್ರಕಟಿತ ಲೇಖನ, ಬಹುಮಾನ, ನನಗೆ ಲೇಖನ ಬರೆಯಲು ಪ್ರೇರಣೆ ಆದವು. ‘ಸುಧಾ’ ನನಗೆ ಪ್ರೇರಕಶಕ್ತಿಯಾದಳು. ‘ಸುಧಾ’, ನನ್ನದು ಬ್ರಹ್ಮಗಂಟು. ಈ ನಮ್ಮ ಅನುಬಂಧದ ಬೆಸುಗೆ ಚಿರನೂತನವಾಗಿರಲಿದೆ.

—ಶೈಲಜಾ ಭಿಂಗೆ, ಬೆಳಗಾವಿ

### ಕನಸು ಬಿತ್ತಿ, ನನಸಾಗಿಸಿದ ‘ಸುಧಾ’

1964ರಲ್ಲಿ ನಾನು ಬೆಂಗಳೂರಿಗೆ ಬಂದಾಗ ಪತ್ರಿಕೆಗಳ ಸಂಖ್ಯೆ ತೀರಾ ಕಡಿಮೆ. ಆ ಕಾಲಘಟ್ಟದಲ್ಲಿ ‘ಸುಧಾ’ ಜನ್ಮತಾಳಿತು. ಅಂದದ ವಿನ್ಯಾಸ, ವೈವಿಧ್ಯಮಯ ವಿಷಯಗಳು ಹಾಗೂ ಉತ್ತಮ ಬರಹಗಳ ಮಿಳಿತದಿಂದ ಮುದ ನೀಡುತ್ತಿದ್ದ ‘ಸುಧಾ’ ಬಹುಬೇಗ ಮನೆಮಂದಿಯ ಮನ ಗೆದ್ದಿತು. ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಈಗ 60ರ ಹೊಸ್ತಿಲಿನಲ್ಲಿದೆ.

‘ಸುಧಾ’ ಓದುತ್ತಿದ್ದ ನಾನು, ಅದಕ್ಕೆ ಬರೆಯುವ ಕನಸು ಕಂಡೆ. ಮೊದಲಷ್ಟು ಪ್ರಯತ್ನಗಳು ಸಫಲವಾಗಲಿಲ್ಲ. ಮರಳಿ ಯತ್ನವ ಮಾಡುತ್ತಾ, 1976ರಲ್ಲಿ ‘ಪಾಸಾಗುತ್ತೆ?’ ಎಂಬ ಕಿರುಬರಹ ಪ್ರಕಟವಾಯಿತು. ನನ್ನ ಕನಸು ನನಸಾಯಿತು.

ಲೇಖನಗಳೊಡನೆ ಛಾಯಾಚಿತ್ರಗಳನ್ನೂ ಪ್ರಕಟಿಸುವ ಸಂಪ್ರದಾಯಕ್ಕೆ ‘ಸುಧಾ’ ನಾಂದಿ ಹಾಡಿತು. ಧಾರಾವಾಹಿಯೊಡನೆ ಪ್ರಕಟವಾಗುತ್ತಿದ್ದ ಡಾ. ಡಿ.ವಿ. ರಾವ್ ಅವರ ಕಪ್ಪುಬಿಳುಪಿನ ಛಾಯಾಚಿತ್ರಗಳು ನನ್ನ ಮನಃಪಟಲದಲ್ಲಿ ಅಚ್ಚಾದವು. ಎಂದಾದರೊಂದು ದಿನ ನನ್ನ ಚಿತ್ರಲೇಖನ ಕಾಣಬೇಕೆಂಬ ಆಸೆ ಅಂಕುರಿಸಲು ಪ್ರೇರಣೆಯಾದವು. ಈ ಹಂಬಲ ಈಡೇರಲು ದಶಕಗಳೇ ಕಾಯಬೇಕಾಯಿತು. 2012ರಲ್ಲಿ ನನ್ನದೊಂದು ಚಿತ್ರಲೇಖನ ಪ್ರಕಟಿಸಿ ಎರಡನೆಯ ಕನಸನ್ನೂ ಸಾಕಾರಗೊಳಿಸಿತು.

ನನ್ನ ಹಲವು ಲೇಖನಗಳನ್ನು ಪ್ರಕಟಿಸುವ ಮೂಲಕ ನನಗೆ ಭೂಮಿಕೆ ಒದಗಿಸಿದ್ದನ್ನು ಸ್ಮರಿಸುತ್ತೇನೆ. ಕನಸುಗಳನ್ನು ಬಿತ್ತಿ ಅವುಗಳನ್ನು ನನಸಾಗಿಸಿದ ‘ಸುಧಾ’ಗೆ ಅನಂತ ಧನ್ಯವಾದ.

—ಮಂಜುನಾಥ ಡಿ.ಎಸ್., ಬೆಂಗಳೂರು